# ಕರ್ನಾಟಕ ವಿಧಾನ ಪರಿಷತ್ತು

**ಲಘು ಪ್ರಕಟಣೆ**

**(ಸಾಂಸದಿಕ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**02ನೇ ಡಿಸೆಂಬರ್, 2024**

ಸಂಖ್ಯೆ:59

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುವ ಅಧಿವೇಶನದ ಸಂಬಂಧ
ಮಾನ್ಯ ಶಾಸಕರುಗಳ ಮಾಹಿತಿಗಾಗಿ

*****

ವಿಧಾನ ಪರಿಷತ್ತಿನ 154ನೇ ಅಧಿವೇಶನವು ದಿನಾಂಕ: 09.12.2024 ರಿಂದ 20.12.2024ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವುದರಿಂದ ವಿಧಾನ ಪರಿಷತ್ತಿನ ಸಚಿವಾಲಯವು ದಿನಾಂಕ:07.12.2024 ರಿಂದ ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಕಾರ್ಯನಿರ್ವಹಿಸಲಿದೆ.

ಅಧಿವೇಶನದಲ್ಲಿ ಪಾಲ್ಗೊಳ್ಳುವ ಮಾನ್ಯ ಶಾಸಕರುಗಳಿಗೆ ಬೆಳಗಾವಿ ನಗರದ ಹೋಟೆಲ್‌ಗಳಲ್ಲಿ ದಿನಾಂಕ:08.12.2024ರಿಂದ ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ವಸತಿ ಸೌಕರ್ಯದ ಮಾಹಿತಿಯನ್ನು ಶ್ರೀಮತಿ ಮೀನಾ ನಾಯಕ್, ಕ್ಷೇತ್ರಾಧಿಕಾರಿ (ಮೊಬೈಲ್ ದೂರವಾಣಿ ಸಂಖ್ಯೆ:9342372385) ಇವರಿಂದ ಪಡೆದುಕೊಳ್ಳಲು ಕೋರಲಾಗಿದೆ.

ಮಾನ್ಯ ಶಾಸಕರುಗಳ ಜೊತೆಯಲ್ಲಿ ಆಗಮಿಸುವ ಆಪ್ತ ಸಹಾಯಕರುಗಳು ಹಾಗೂ ವಾಹನ ಚಾಲಕರುಗಳಿಗೆ ಬೆಳಗಾವಿಯಲ್ಲಿ ವಸತಿ ಹಾಗೂ ಸಾರಿಗೆ ವ್ಯವಸ್ಥೆಯನ್ನು ಈ ಹಿಂದಿನಂತೆ ತಮ್ಮ ಹಂತದಲ್ಲಿಯೇ ವ್ಯವಸ್ಥೆ ಮಾಡಿಕೊಳ್ಳಲು ಕೋರಲಾಗಿದೆ. ಹಾಗೂ ಈ ಸಂಬಂಧವಾಗಿ ಶ್ರೀ ಪಿಂಟೋ ಮೊ.ಸಂ:9986613421 ಮತ್ತು ಶ್ರೀ ನಿಂಗಪ್ಪ ಹರಿಜನ ಮೊ.ಸಂ:8183804455 ಇವರುಗಳನ್ನು ಸಂಪರ್ಕಿಸಿಕೊಳ್ಳುವುದು.

ಅಧಿವೇಶನದ ಸಮಯದಲ್ಲಿ ಮಾನ್ಯ ಶಾಸಕರುಗಳಿಗೆ ಬೆಳಗಿನ ಉಪಹಾರವನ್ನು ಅವರುಗಳು ವಾಸ್ತವ್ಯ ಹೂಡಲಿರುವ ಹೋಟೆಲ್‌ಗಳಲ್ಲಿಯೇ ವ್ಯವಸ್ಥೆ ಮಾಡಲಾಗಿದ್ದು, ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಸುವರ್ಣ ವಿಧಾನಸೌಧದಲ್ಲಿ ಏರ್ಪಡಿಸಲಾಗಿರುತ್ತದೆ. ರಾತ್ರಿ ಊಟದ ವ್ಯವಸ್ಥೆಯನ್ನು ಈ ಹಿಂದಿನಂತೆ ಮಾನ್ಯ ಶಾಸಕರುಗಳೇ ಮಾಡಿಕೊಳ್ಳಲು ಕೋರಲಾಗಿದೆ.

ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.